

## ಬಗ್ ಸೀ

ನನ್ನ ಸ್ನೇಹಿತೆ ಅಮೆರಿಕದಿಂದ ಬಂದ ತನ್ನ ಮಗಳು, ಮೊಮ್ಮಗಳನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿದ್ದಳು. ಆ ಮಗುವಿಗೆ ಕನ್ನಡ ಬರುತ್ತಿರಲಿಲ್ಲ. ಹಾಗಾಗಿ ನಮ್ಮಬಳಿ ಮಾತು ಕಡಿಮೆಯಿತ್ತು. ಸ್ನೇಹಿತೆಗೆ ಅದರ ಭಾಷೆ ಅಲ್ಪ ಸ್ವಲ್ಪ ಅರ್ಥ ಆಗುತ್ತಿತ್ತು. ಹಾಗಾಗಿ ಅದು ಏನು ಹೇಳಿದರೂ ತಲೆಯಾಡಿಸಿ ನಗುತ್ತಿದ್ದಳು. ನಾವೆಲ್ಲ ಮಾತಿಗೆ ತೊಡಗಿದ್ದಾಗ ಮಗು ಅಜ್ಜಿ ತೊಡೆಬಿಟ್ಟು ದಿವಾನದ ಮೇಲೆ ಕೂತುಕೊಂಡಿತು. ಸ್ವಲ್ಪ ಹೊತ್ತಿಗೆ 'ಮಾಮ್ ಸೀ ಬಗ್ ಬಗ್' ಎಂದು ಕೂಗಿತು. ನನ್ನ ಸ್ನೇಹಿತೆ ಅವಳ ಹತ್ತಿರ ಹೋಗಿ 'ವಾಟ್ ಪುಟ್ಟಾ' ಅಂದಳು. ಮತ್ತೆ ಆ ಹುಡುಗಿ 'ಬಗ್ ಸೀ' ಅಂತ ದಿವಾನದ ಕೆಳಗೆ ತೋರಿಸಿತು. ನನ್ನ ಸ್ನೇಹಿತೆ ಬಗ್ಗಿ ಬಗ್ಗಿ ನೋಡಿದರೂ ಏನೂ ಕಾಣಲಿಲ್ಲ. ಆ ಹುಡುಗಿ ಮಾತ್ರ ಒಂದೇಸಮನೆ ಕೂಗುತ್ತಿತ್ತು 'ಬಗ್ ಸೀ' ಎಂದು. 'ಬಗ್ಗೇ ನೋಡಿದ್ನಲ್ಲಾ ಅಲ್ಲೇನು ಇಲ್ಲಪ್ಪಾ' ಅಂತ ಹೇಳಿದ್ರೂ ಕೇಳದೆ ಜೋರಾಗಿ ಅಳೋಕೆ ಶುರುಮಾಡಿತು. ಅವರಮ್ಮ ಎದ್ದೋಗಿ ನೋಡಿ ಜೋರಾಗಿ ನಗಲು ಶುರುಮಾಡಿದಳು. 'ಏನಾಯ್ತೆ' ಎಂದು ನಾನು ಕೇಳಿದೆ. ಅದಕ್ಕವಳು ಹೇಳಿದ್ದು, 'ಪಾಪು ಕೆಳಗಿಳಿಯೋಕೆ ನೋಡಿದ್ದಾಳೆ. ಅಲ್ಲಿ ಗೊದ್ದ ಓಡಾಡ್ತಿದ್ಯಲ್ಲ ಹೆದ್ರಕೊಂಡು ಕೂಗಿದ್ದಾಳೆ. ಅವ್ಳಿಗೆ ಕನ್ನಡ ಬರಲ್ವಲ್ಲಾ ಅದಕ್ಕೆ 'ಬಗ್' ಅಂದಿದ್ದಾಳೆ' ಅಂದಳು!

**'ಸುಮಾ ಕಳಸಾಪುರ'**

## ಹಿರಿಯರ ಜಾಣತನ



ಶಿವಮೊಗ್ಗ ಇಂಟರ್‌ಸಿಟಿ ರೈಲಿನಲ್ಲಿ ಎದುರುಬದುರು ಸೀಟಿನಲ್ಲಿ ಆರು ಜನ ಯುವಕರು ಕುಳಿತಿದ್ದರು. ಆ ಬೋಗಿ ಕಾಯ್ದಿರಿಸದ ಬೋಗಿಯಾಗಿತ್ತು. ರೈಲು ಹೊರಡುವ ಸಮಯಕ್ಕೆ ಹತ್ತು ನಿಮಿಷವಿರುವಾಗ ವಯಸ್ಸಾದವರೊಬ್ಬರು ಆ ಬೋಗಿ ಹತ್ತಿದರು. ಸೀಟು ಖಾಲಿ ಇರಲಿಲ್ಲ. ಕುಳಿತಿದ್ದ ಯುವಕರ ಬಳಿ ಸ್ವಲ್ಪ ಜಾಗ ಕೊಡುವಂತೆ ಕೇಳಿದರು. ಆ ಹುಡುಗರು ಸುಮ್ಮನಿದ್ದರು. ಆ ಹಿರಿಯರು ಮತ್ತೊಮ್ಮೆ ಕೇಳಿದಾಗ, 'ಅಜ್ಜಾ, ಒಂದೆರಡು ಗಂಟೆ ಆದರೆ ಜಾಗ ಬಿಡಬಹುದಿತ್ತು. ನಾವು ಶಿವಮೊಗ್ಗಕ್ಕೆ ಹೊರಟಿರುವುದು. ಐದಾರು ಗಂಟೆ ನಿಲ್ಲಲು ಆಗುವುದಿಲ್ಲ' ಎಂದರು. ಆಗ ಆ ಹಿರಿಯರು 'ಒಂದೆರಡು ಗಂಟೆ ಪ್ರಯಾಣ ಆಗಿದ್ದರೆ ಜಾಗ ಬಿಡುತ್ತಿದ್ದಿರಾ?' ಎಂದಾಗ ಎಲ್ಲರೂ 'ಹೂಂ' ಗುಟ್ಟಿದರು. 'ಇದೇ ಮಾತೇನಪ್ಪಾ ನಿಮ್ಮದು?' ಎಂದು ಮತ್ತೆ ಕೇಳಿದಾಗಲೂ 'ಹೂಂ' ಗುಟ್ಟಿದರು. ಆಗ ಹಿರಿಯರು 'ಒಂದು ಕೆಲಸ ಮಾಡಿ. ನೀವು ಹೇಗೂ ಆರು ಜನ ಇದ್ದೀರಲ್ಲಾ? ಒಬ್ಬೊಬ್ಬರು ಒಂದೊಂದು ಗಂಟೆ ನಿಂತುಕೊಳ್ಳಿ. ಅಲ್ಲಿಗೆ ಶಿವಮೊಗ್ಗ ಬಂದೇ ಬಿಡುತ್ತದೆ. ಮೊದಲು ನನಗೆ ಯಾರು ಜಾಗ ಕೊಡುತ್ತೀರೋ ನೋಡಿ!' ಎಂದರು.

**ಸು. ವಿಜಯಲಕ್ಷ್ಮಿ**